ಎಂಬ ಆಶಯ ಇದರ ಹಿಂದಿರುತ್ತದೆ. ನಾನು ಬಾಲ್ಯದಲ್ಲಿ ಪೆನ್ನು ಕುಕ್ಕಿದ ಘಟನೆಗೆ ಇಂತಹ ಆಶಯವೇನೂ ಇರಲಿಲ್ಲ. ಹಾಗಾಗಿ, ಆ ವರ್ತನೆಯ ಪಶ್ಚಾತ್ತಾಪ ಈಗಲೂ ಕಾಡುತ್ತದೆ, ಪಾಠವಾಗಿ ಒದಗಿಬರುತ್ತದೆ.

ನಿಬ್ಬು ಮುರಿದರೆ ಅದರ ಆಯಸ್ಸು ಮುಗಿದಂತೆ, ಪೆನ್ನನ್ನೇ ಬದಲಿಸಬೇಕು ಎಂಬ ಮಕ್ಕಳ ಆರಂಭಿಕ ಅಜ್ಞಾನ ಬಹಳದಿನ ಇರಲಿಲ್ಲ. ಇಂಕು ಫಿಲ್ಲರ್ ಬಳಸಿ ಹತ್ತು ಪೈಸೆಗೆ ಪೆನ್ನಿನ ಪೂರ್ತಿ ಹೊಟ್ಟೆ, ಐದು ಪೈಸೆಗೆ ಅರ್ಧ ಹೊಟ್ಟೆ ಇಂಕು ತುಂಬಿಸಿಕೊಡುತ್ತಿದ್ದ ಕರಿಬಸಪ್ಪನ ಅಂಗಡಿಯಲ್ಲಿ ಹೊಸ ನಿಬ್ಬುಗಳು ದೊರೆಯತೊಡಗಿದಾಗ ಹುಡುಗರಲ್ಲಿ ಸಹಜವಾಗಿ ಉತ್ಸಾಹ ಮೂಡಿತು. ಹೊಸ ನಿಬ್ಬಿನಿಂದ ಮಸಿ ಸರಾಗವಾಗಿ ಹರಿಯದಿದ್ದರೆ ತರಗತಿಯಲ್ಲಿ ಜೋರಾಗಿ ಪೆನ್ನು ಕೊಡಹುವುತ್ತಿದ್ದರು. ಆಗ ಚಿಮ್ಮಿದ ಇಂಕು ಪಕ್ಕದಲ್ಲಿ ಕುಳಿತ ಹುಡುಗನ ಅಂಗಿಯ ಮೇಲೆ ಮೂಡಿಸಿದ ಚಿತ್ತಾರ ಪಾಲಕರ ನಡುವಿನ ಕಿತ್ತಾಟಕ್ಕೂ ಕಾರಣವಾಗುತ್ತಿತ್ತು.

ನಿಬ್ಬು ಸೇರಿಸಿದ ಜಾಗದಲ್ಲೋ, ಇಂಕಿನ ಟ್ಯಾಂಕಿನಂತಹ ಹಿಡಿಕೆಯಲ್ಲೋ ಪೆನ್ನು ಸೋರುವುದನ್ನು ಯಾವ ಹುಡುಗರೂ ಒಂದು ಸಮಸ್ಯೆ ಅಂತ ಭಾವಿಸಿದ್ದೇ ಇಲ್ಲ. ಸೋರದಿರುವ ಪೆನ್ನಿನ ಮಾಲೀಕರು ದುರ್ಬೀನು ಹಾಕಿ ಹುಡುಕಿದರೂ ಸಿಗಲಾರರು. ಪೆನ್ನಿನ ಕ್ಯಾಪು ತೆಗೆದಾಗ ಬಸಿಯುವ ಇಂಕನ್ನು ಹುಡುಗರು ತಲೆಗೆ ಒರೆಸಿಕೊಂಡು ಏನೂ ಆಗಿಲ್ಲವೆಂಬಂತೆ ಬರವಣಿಗೆಯಲ್ಲಿ ತೊಡಗುತ್ತಿದ್ದರು. ಪೆನ್ನು ಬಗ್ಗಿಸಿ ಅದರ ಕುತ್ತಿಗೆ ಭಾಗದ ಥ್ರೆಡ್ ತಿರುಗಿಸಿದಾಗ ನಿಬ್ಬು ಮೂಲಕ ಬೀಳುತ್ತಿದ್ದ ಮಸಿಯನ್ನು ಮತ್ತೊಬ್ಬರ ಪೆನ್ನಿಗೆ ಹನಿಗಳ ಲೆಕ್ಕದಲ್ಲಿ ಕಡ ಕೊಡುವ ಪದ್ಧತಿಯೂ ಇತ್ತು. ಅನುಮಾನದ ಹುಡುಗರು ಆ ಹನಿಗಳನ್ನು ಅಂಗೈಯಲ್ಲೇ ಹಾಕಿಸಿಕೊಂಡು, ಎಣಿಸಿ ಪೆನ್ನಿಗೆ ತುಂಬಿಸಿಕೊಳ್ಳುತ್ತಿದ್ದರು.

ಹುಡುಗರ ಹಲ್ಲುಗಳು, ತಲೆಕೂದಲು, ಅಂಗಿಯ ಜೇಬು, ಪಾಟಿಚೀಲದ ಮೂಲೆ ಹೀಗೆ ತನ್ನ ಇರುವಿಕೆಯನ್ನು ಸಾರುವ ಯಾವ ಜಾಗವನ್ನೂ, ಅವಕಾಶವನ್ನೂ ಸೋರುವ ಪೆನ್ನು ಕಳೆದುಕೊಳ್ಳುತ್ತಿರಲಿಲ್ಲ. ಮಸಿ ಹಚ್ಚಿಸಿಕೊಂಡು ಓಡಾಡುವ ಮಕ್ಕಳಿಗೆ ಕೂಡ ತಾವೂ ಇಂಕು ಪೆನ್ನಿನ ಒಡೆಯರು ಎಂದು ತೋರಿಕೊಳ್ಳುವ ಹೆಮ್ಮೆ. ಕ್ರಮೇಣ ಮಕ್ಕಳಲ್ಲಿ ಇಂಕು ಪೆನ್ನಿನ ಬಳಕೆಯ ರೀತಿರಿವಾಜುಗಳ ಬಗ್ಗೆ ತಿಳಿವಳಿಕೆ ಮೂಡಿ, ಅನುಭವವೂ ಕೂಡಿ ಪ್ರಬುದ್ಧರಾಗಿದ್ದು ಮತ್ತೊಂದು ಘಟ್ಟ. ಆ ಸಮಯದಲ್ಲೇ ನಾನಾ ಬಣ್ಣದ, ಬೆಲೆಯ, ಸ್ವರೂಪದ ಪೆನ್ನುಗಳು ಕರಿಬಸಪ್ಪನ ಅಂಗಡಿಗೆ ಬರತೊಡಗಿದವು. ಪೆನ್ನೊಳಗೆ ಇರುವ ಇಂಕಿನ ಮಟ್ಟ ಕಾಣಿಸುವಂತಹ ಪಾರದರ್ಶಕ ಪೆನ್ನು ನನ್ನನ್ನು ಬಹಳ ಆಕರ್ಷಿಸಿತ್ತು. ಮನೆಯಲ್ಲಿ ಹಟ ಹಿಡಿದು ಅಂತಹದ್ದೊಂದು ಪೆನ್ನು ಕೊಡಿಸಿಕೊಂಡು ಸಹಪಾಠಿಗಳ ಹೊಟ್ಟೆಕಿಚ್ಚಿಗೆ ಕಾರಣವಾಗಿದ್ದೆ.

ಧರ್ಮಾವರಂ ಪಟ್ಟಣದಲ್ಲಿ ಗುಮಾಸ್ತರಾಗಿದ್ದ ನಮ್ಮ ತಾತ ವರ್ಷಕ್ಕೊಮ್ಮೆ ಊರಿಗೆ ಬರುವಾಗ ಕೆಲವು ಪೆನ್ನುಗಳನ್ನು ತಂದು ನಮ್ಮ ಮನೆಯ ಎಲ್ಲಾ ಹುಡುಗರಿಗೂ ಹಂಚುತ್ತಿದ್ದರು. ನನ್ನನ್ನು ತುಸು ಜಾಣ ವಿದ್ಯಾರ್ಥಿ ಎಂದು ಪರಿಗಣಿಸಿದ್ದ ತಾತ ನನಗೆ ಇದ್ದುದರಲ್ಲೇ ಒಳ್ಳೆಯ ಪೆನ್ನು ಆರಿಸಿ ಕೊಡುತ್ತಿದ್ದರು. ಒಮ್ಮೆ ಅವರು ನೀಡಿದ್ದ ಬೆಲೆ ಬಾಳುವ ಪಾರ್ಕರ್ ಪೆನ್ನು ಈಗಲೂ ನನ್ನ ಬಳಿ ಇದೆ. ಹಾಗೆಯೇ, ಅಪ್ಪನ ಸ್ನೇಹಿತರಾಗಿದ್ದ ಹೊಸಮನಿ ಷಣ್ಮುಖಪ್ಪ ಮಾಮಾ ನನ್ನನ್ನು ಲೇಖಕ ಎಂದು ಸಾಂಕೇತಿಕವಾಗಿ ಗುರುತಿಸಲು ಎಂಬಂತೆ ಮದುವೆಯ ದಿನ ನೀಡಿದ್ದ ಜಾಟರ್ ರಿಫಿಲ್ಲಿನ ಹೀರೊ ಪೆನ್ನನ್ನು ಜೋಪಾನವಾಗಿ ಕಾಯ್ದಿರಿಸಿದ್ದೇನೆ.

ಹೈಸ್ಕೂಲು ತಲುಪುವ ಹೊತ್ತಿಗೆ ನನ್ನಲ್ಲಿ ಸಾಕಷ್ಟು 'ಮಸಿ ಜಾಗೃತಿ' ಮೂಡಿತ್ತು. ಎಲ್ಲರಂತೆ ನೀಲಿ ಮಸಿ ಬದಲು ಕಪ್ಪು ಮಸಿ ಬಳಸುವುದನ್ನು ಹವ್ಯಾಸ ಮಾಡಿಕೊಂಡಿದ್ದೆ. ನನ್ನ ಈ ಕಪ್ಪು 'ಮಸಿಪ್ರೇಮ' ಕ್ರಮೇಣ ನನಗೊಂದು ಐಡೆಂಟಿಟಿ ಕೊಟ್ಟಿದ್ದು ಗರ್ವದ ಸಂಗತಿ. ನಾನು ಬಳ್ಳಾರಿ ಕಾಲೇಜಿನಲ್ಲಿ